ಖಜಾನೆ

ಯುರಿ ಶುಲೆವ್ಷಿಟ್ಸ



ಇಸಾಕನ ಕನಸಿನಲ್ಲಿ ಒಂದು ದನಿಯು
“ನೀನು ರಾಜಧಾನಿಗೆ ಹೋಗು.
ಅಲ್ಲಿಯ ಅರಮನೆಯ ಹತ್ತಿರದ
ಸೇತುವೆಯ ಕೆಳಗೆ ಹುಗಿದಿಟ್ಟ
ಖಜಾನೆಯನ್ನು ಶೋಧಿಸಿ ಹೊರತೆಗೆ.”
ಎಂದು ಮೂರು ಸಲ ಹೇಳಿತು.
ಮೊದಮೊದಲು ಇಸಾಕನಿಗೆ ಇಂತಹ
ಕನಸಿನಲ್ಲಿಯ ಮೂರ್ಖ ಮಾತುಗಳ
ಮೇಲೆ ಎಳ್ಳಷ್ಟು ವಿಶ್ವಾಸವಿರಲಿಲ್ಲ.
ಆದರೂ ಇದರ ನೈಜತೆಯನ್ನು
ನಿರ್ಧರಿಸಲೆಂದು ಅವನು
ರಾಜಧಾನಿಯ ಪಯಣಕ್ಕೆ ಹೊರಟನು.
ಇದು ಒಂದು ದೀರ್ಘವಾದ ಪ್ರವಾಸ.
ಆ ಪ್ರವಾಸ ಅವನನ್ನು ಎಲ್ಲಿಗೆ
ಒಯ್ಯುತ್ತದೆ? ಅಲ್ಲಿ ಅವನಿಗೆ ಏನು
ದೊರೆಯುತ್ತದೆ?

ಈ ಸಾಹಸ ಕತೆ ನಿಮಗೆ
ಹಿಡಿಸಬಹುದು.

ಖಜಾನೆ

ಯುರಿ ಶುಲೆವ್ಸ್ಕಿ

ಕನ್ನಡಕ್ಕೆಃ ಪ್ರಭಾಕರ ನಾನಾವಟಿ

ಒಂದಾನೊಂದು ಕಾಲದಲ್ಲಿ ಒಂದು ನಗರದಲ್ಲಿ ಇಸಾಕ ಎಂಬ ಬಡವ ವಾಸಿಸುತ್ತಿದ್ದನು.

ಬಡತನದಿಂದಾಗಿ ಆತನಿಗೆ ಎರಡು ಹೊತ್ತು ಹೊಟ್ಟೆತುಂಬ ಊಟ ಕೂಡ ದೊರೆಯುತ್ತಿರಲಿಲ್ಲ. ಅರೆಹೊಟ್ಟೆಯಲ್ಲಿಯೇ ಆತ ಮಲಗುತ್ತಿದ್ದನು.



ಒಂದು ರಾತ್ರಿ ಅವನಿಗೆ ಕನಸು ಬಿತ್ತು.

ಅವನ ಕನಸಿನಲ್ಲಿ ಒಂದು ದನಿಯು “ನೀನು ರಾಜಧಾನಿಗೆ ಹೋಗು. ಅಲ್ಲಿ ಅರಮನೆಯ ಮಗ್ಗಲಿದ್ದ ಸೇತುವೆಯ ಕೆಳಗೆ ಚಿನ್ನ ರತ್ನಗಳು ತುಂಬಿದ ಖಜಾನೆ ಪೆಟ್ಟಿಗೆ ಹುಗಿದಿಟ್ಟಿದೆ. ಅದನ್ನು ಹೊರತೆಗೆ.” ಎಂದು ಹೇಳಿತು.
ಅವನಿಗೆ ಎಚ್ಚರವಾಯಿತು. “ಛೀ, ಇದು ಬರಿ ಕನಸು!” ಎಂದೆನ್ನುತ್ತ ಅದರ ಗೊಡವೆಗೆ ಆತ ಹೋಗಲಿಲ್ಲ.



ಎರಡನೆ ರಾತ್ರಿ ಕೂಡ ಇದೇ ಕನಸನ್ನು ಆತನು ಕಂಡನು.
ಅವನು ಅದನ್ನು ಕೂಡ ದುರ್ಲಕ್ಷಿಸಿದನು.

ಮೂರನೆಯ ಸಲ ಕನಸಿನಲ್ಲಿ ಆ ದನಿ ಕೇಳಿದಾಗ ಮಾತ್ರ
“ಇದು ನಿಜವಿರಬೇಕು.” ಎಂದು ರಾಜಧಾನಿಯ
ಪಯಣಕ್ಕೆ ಅಡಿಯಾದನು.





ದಾರಿಗುಂಟ ಹೋಗುವಾಗ ಕೆಲ ಸಲ ಅವನನ್ನು ಬಂಡಿಯಲ್ಲಿಂದ ಸ್ವಲ್ಪ ದೂರದವರೆಗೆ ಜನರು ಮುಟ್ಟಿಸುತ್ತಿದ್ದರು. ಆದರೆ ಅವನ ಹೆಚ್ಚಾನುಹೆಚ್ಚು ಪ್ರವಾಸ ಕಾಲ್ನಡಿಗೆಯಲ್ಲಿಯೇ ಆಯಿತು.



ದಾರಿಯಲ್ಲಿ ಅವನು ಬೆಟ್ಟಗಳನ್ನು ದಾಟಿದನು.



ಗುಡ್ಡಗಳನ್ನು ಏರಿಳಿದನು.

ಕೊನೆಯಲ್ಲಿ ಒಂದು ದಿನ ಆತ ರಾಜಧಾನಿ ತಲುಪಿದನು.



ಅರಮನೆ ಹತ್ತಿರದ ಸೇತುವೆಯ ಹತ್ತಿರ ಬಂದಾಗ ಆ ಸೇತುವೆಯನ್ನು ಅರಮನೆಯ ರಕ್ಷಕಪಡೆ ದಿನ ರಾತ್ರಿ ಗಸ್ತು ಹಾಕುತ್ತ ಕಾವಲಿಗಿದ್ದದ್ದು ಅವನಿಗೆ ತಿಳಿಯಿತು.

ಹೀಗಾಗಿ ಸೇತುವೆಯ ಕೆಳಗಿನ ಹುಗಿದಿಟ್ಟ ಖಜಾನೆಯನ್ನು
ಹೊರತೆಗೆಯುವ ಯೋಚನೆಯನ್ನು ಬಿಟ್ಟು
ಬಿಡಬೇಕಾಯಿತು.

ಆದರೂ ಇಸಾಕನು ದಿನಾಲು ಮುಂಜಾನೆಯಿಂದ
ರಾತ್ರಿಯಾಗುವತನಕ ಆ ಸೇತುವೆಯ ಸುತ್ತಮುತ್ತ
ತಿರುಗುತ್ತಿದ್ದನು.

ರಕ್ಷಕಪಡೆಯ ಮುಖ್ಯಸ್ಥನಿಗೆ ಇದು ಗಮನಕ್ಕೆ ಬಂತು. ಒಂದು ದಿನ ಮುಖ್ಯಸ್ಥನು ಇಸಾಕನನ್ನು ಕರೆದು "ನೀನೇಕೆ ದಿನಾಲು ಇಲ್ಲಿ ಬರುವೆ?" ಎಂದು ಪ್ರಶ್ನಿಸಿದನು.

ಇಸಾಕನು ತನಗೆ ಬಿದ್ದ ಕನಸಿನ ವಿವರಗಳನ್ನು ಹೇಳಿದನು.
ಮುಖ್ಯಸ್ಥ ನಗತೊಡಗಿದನು.

“ಎಂತಹ ಬಡ ಮನುಷ್ಯ ನೀನು! ಪಾಪ ಕನಸಿನಲ್ಲಿ ಕಂಡದ್ದನ್ನು ನಿಜವೆಂದು ತಿಳಿಯುವೆ! ಕೇಳಿಲ್ಲಿ, ನಾನು ಕೂಡ ನಿನ್ನಂತೆನೆ ಒಂದು ಕನಸು ಕಂಡಿದ್ದೆ. ಆ ಕನಸಿನಲ್ಲಿ ನನಗೂ ನೀನಿರುವ ನಗರಕ್ಕೆ ಹೋಗಿ ಅಲ್ಲಿರುವ ಇಸಾಕನ ಮನೆ ಕೆಳಗಿರುವ ಖಜಾನೆಯನ್ನು ಹುಡುಕಿ ತೆಗೆ ಎಂದು ದನಿ ಹೇಳಿತು. ಅದೆಲ್ಲ ಪೊಳ್ಳು ಮಾತು!” ಎಂದೆನ್ನುತ್ತ ಜೋರುಜೋರಾಗಿ ನಗತೊಡಗಿದನು.



ಇಸಾಕನು ಮುಖ್ಯಸ್ಥನನ್ನು ವಂದಿಸಿ ಮನೆದಾರಿ ಹಿಡಿದನು.

ಮತ್ತೇ ಗುಡ್ಡಗಳನ್ನು ಏರಿಳಿದನು.



ಅಡವಿಯ ದಾರಿಯ ಮೇಲಿಂದ ನಡೆದನು.



ಕೆಲಸಲ ದಾರಿಯಲ್ಲಿಯ ಜನ ಅವನನ್ನು ಬಂಡಿಯಲ್ಲಿ ಕೂಡಿಸಿ ಸ್ವಲ್ಪ ದೂರದವರೆಗೆ ಬಿಡುತ್ತಿದ್ದರು. ಆದರೂ ಬಹಳಷ್ಟು ದೂರ ಆತನು ನಡೆದು ಬಂದನು.



ಕೊನೆಯಲ್ಲಿ ಒಂದು ದಿನ ಆತನು ತನ್ನ ನಗರವನ್ನು ತಲುಪಿದನು. ತನ್ನ ಮನೆ ಮುಟ್ಟಿದ ಕೂಡಲೆ ತನ್ನ ಅಡಿಗೆ ಮನೆಯನ್ನು ಹಡ್ಡಿ ತೆಗೆದನು. ಅಲ್ಲಿಯೇ ಅವನಿಗೆ ಹುಗಿದಿಟ್ಟ ಖಜಾನೆ ದೊರೆಯಿತು.



ಅವನು ತನ್ನ ನಗರದಲ್ಲಿ ಒಂದು ಪ್ರಾರ್ಥನಾ ಮಂದಿರವನ್ನು ಕಟ್ಟಿಸಿದನು. ಆ ಮಂದಿರದ ಒಂದು ಮೂಲೆಯಲ್ಲಿ ಕಲ್ಲಿನ ಮೇಲೆ *ಕೆಲವೊಂದು ಸಲ ಸಮೀಪದಲ್ಲಿದ್ದದ್ದನ್ನು ಹುಡುಕಲು ಬಹಳ ದೂರದವರೆಗೆ ಹೋಗಬೇಕಾಗುತ್ತದೆ* ಎಂಬ ನುಡಿಯನ್ನು ಕೆತ್ತಿಸಿದನು.

ಇಸಾಕನು ರಕ್ಷಕಪಡೆಯ ಮುಖ್ಯಸ್ಥನಿಗೆ ತನ್ನ ಖಜಾನೆಯಲ್ಲಿಯ ಒಂದು ರತ್ನದ ಹರಳನ್ನು ಕಾಣಿಕೆ ಎಂದು ಕಳುಹಿಸಿಕೊಟ್ಟನು. ತನ್ನ ಮುಂದಿನ ಆಯುಷ್ಯವನ್ನು ಸಮಾಧಾನದಿಂದ ಕಳೆದನು. ಅವನು ಇನ್ಮುಂದೆ ಎಂದೂ ಬಡವನಾಗಲಿಲ್ಲ.